# ಅಂತಿಮ ವರದಿ

| | |
|---|---|
| ಸಂಸ್ಥೆಯ ಹೆಸರು | ಸ್ನೇಹಕುಂಜ ಟ್ರಸ್ಟ್ (ರಿ) ಹೊನ್ನಾವರ |
| ಯೋಜನೆಯ ಹೆಸರು | ಸಾಂಸ್ಕೃತಿಕ ಅಭಿವ್ಯಕ್ತಿಯ ಮೂಲಕ ಕೊರಗ ಸಮುದಾಯದ ಅಸ್ಮಿತೆ, ಘನತೆ ಗೌರವಗಳನ್ನು ಎತ್ತಿ ಹಿಡಿವ ಕೆಲಸವನ್ನು ಮುಂದುವರಿಸಿಕೊಂಡು ಹೋಗಲು ಯುವ ಪೀಳಿಗೆಯನ್ನು ಸಶಕ್ತಗೊಳಿಸುವುದು. |
| ವರದಿಯ ದಿನಾಂಕ | 01–08–2021 |
| ವರದಿ ತಯಾರಿಸಿದವರು | ಲೇಖರಾಜ್ lekhraj4379@gmail.com |
| ಯೋಜನಾ ವ್ಯಾಪ್ತಿ | ಮಂಗಳೂರು |
| ಯೋಜನಾ ಅವಧಿ | ಜನವರಿ 2021 ರಿಂದ ಮೇ 2021 |
| ಯೋಜನೆಯ ಉದ್ದೇಶ | ಸಾಂಸ್ಕೃತಿಕ ಅಭಿವ್ಯಕ್ತಿಯ ಮೂಲಕ ಕೊರಗ ಸಮುದಾಯದ ಅಸ್ಮಿತೆ, ಘನತೆ ಗೌರವಗಳನ್ನು ಎತ್ತಿ ಹಿಡಿವ ಕೆಲಸವನ್ನು ಮುಂದುವರಿಸಿಕೊಂಡು ಹೋಗುವ ಒಂದು ಸಶಕ್ತ ಯುವತಿ/ಯುವಕರ ತಂಡವನ್ನು ಸಿದ್ಧಗೊಳಿಸುವುದು. |
| ಯೋಜನಾ ಅನುದಾನ | |
| ಯೋಜನಾ ಸಹಯೋಗ (ಅನೌಪಚಾರಿಕ) | ಕೊರಲ್ ಕಲಾ ತಂಡ, ಕುಡ್ಲ |
| ಸಹಯೋಗಕ್ಕೆ ಕಾರಣಗಳು | Particularly vulnerable Tribe ಎಂದು ಗುರುತಿಸಲ್ಪಟ್ಟಿರುವ ಅಳಿವಿನಂಚಿಗೆ ಜಾರುತ್ತಿರುವ ಕೊರಗ ಸಮುದಾಯದ ಸಾಂಸ್ಕೃತಿಕ ಸಬಲೀಕರಣವನ್ನು ಕೊರಗ ಯುವ ಜನರ ಮೂಲಕ ಸಾಧಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. ಸಮುದಾಯ ಸಹಭಾಗಿತ್ವದ ಯೋಜನೆಯಾದ್ದರಿಂದ ಆಳವಾದ ಅನುಭವ ಮತ್ತು ಕೊರಗ ಸಮುದಾಯದ ಹಿತಾಸಕ್ತಿ ಕಾಯುವ ಕೆಲಸ ಮಾಡಿರುವ ಹಿನ್ನೆಲೆಯುಳ್ಳ ಕೊರಗ ಸಮುದಾಯದ ಸಂಘಟನೆ ಅಥವಾ ವ್ಯಕ್ತಿಗಳ ಸಹಯೋಗವಿದ್ದಲ್ಲಿ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಬಹುದು ಎನ್ನುವ ಉದ್ದೇಶದಿಂದ 40 ವರ್ಷಗಳಿಗೂ ಮಿಕ್ಕಿ ಸಮುದಾಯದ ಹಿತಾಸಕ್ತಿಗಾಗಿ ನಿಸ್ವಾರ್ಥವಾಗಿ ದುಡಿದಹಿನ್ನೆಲೆ ಇರುವ ವ್ಯಕ್ತಿಗಳಿಂದ ರಚಿತವಾದ, 12 ವರುಷಗಳಿಂದ ಸಾಂಸ್ಕೃತಿಕ ವಲಯದಲ್ಲಿ ಸಕ್ರಿಯವಾಗಿರುವ ಕೊರಲ್ ಕಲಾ ತಂಡ, ಕುಡ್ಲ ಇದರ ಜೊತೆ ಸ್ವಯಂ ಸೇವಾನೆಲೆಯಲ್ಲಿ ಅನೌಪಚಾರಿಕ ಸಹಯೋಗವನ್ನು ಸಾಧಿಸಲಾಯಿತು. |

**ಯೋಜನೆ ಕಾರ್ಯಗತಗೊಳಿಸುವಲ್ಲಿ ತೊಡಕಾದ ಅಂಶಗಳು:**

1. ಕೋವಿಡ್ – 19

ಯೋಜನೆ ಆರಂಭಗೊಳಿಸುವ ಹೊತ್ತಿಗೆ ಕೋವಿಡ್–19ರ ಎರಡನೆ ಅಲೆ ಹಬ್ಬತೊಡಗಿತು. ಹಾಗಾಗಿ ಯೋಜನೆಯ ಆರಂಭವನ್ನು ಫೆಬ್ರವರಿ ತಿಂಗಳಿಗೆ ಮುಂದೂಡಬೇಕಾಯಿತು. ಫೆಬ್ರವರಿ 2ನೇ ವಾರದಲ್ಲಿ ಕಾರ್ಯಕ್ರಮ ಆರಂಭಿಸಿದರೂ, ಪುನಃ ಲಾಕ್ ಡೌನ್ ಆಗುವ ಭಯ ಇದ್ದದ್ದರಿಂದ ಎಲ್ಲಾ ಕಾರ್ಯಕ್ರಮಗಳನ್ನೂ ಮಾರ್ಚ್ ತಿಂಗಳ ಅಂತ್ಯದೊಳಗೆ ಮುಗಿಸಬೇಕಾದ ಅನಿವಾರ್ಯತೆಗೆ ಒಳಗಾಗಬೇಕಾಯಿತು. ಇದು ಶಿಬಿರಾರ್ಥಿಗಳು, ಸಂಪನ್ಮೂಲ ವ್ಯಕ್ತಿಗಳು ಮತ್ತು ಸಂಘಟಕರ ಮೇಲೆ ಅಸಾಧ್ಯ ಒತ್ತಡವನ್ನು ಹೇರಿತು. ಕೋವಿಡ್ ನಿಯಮಾವಳಿಗಳಿಂದಾಗಿ ಯೋಜನೆಯ ಅಂತ್ಯಕ್ಕೆ ಮಂಗಳೂರು ನಗರ ಕೇಂದ್ರದಲ್ಲಿ ಸಾರ್ವಜನಿಕ ಕಾರ್ಯಕ್ರಮ ನೀಡಲು ಅಸಾಧ್ಯವಾಗಿ, ಪ್ರದರ್ಶನವನ್ನು ಸಮುದಾಯಕ್ಕೆ ಸೀಮಿತಗೊಳಿಸಬೇಕಾಯಿತು. ಲಾಕ್ ಡೌನ್ ಕಾರಣದಿಂದಾಗಿ ಪ್ರದರ್ಶನಾನಂತರ ಯೋಜನಾ ತಂಡಕ್ಕೆ ಪುನಃ ಒಟ್ಟು ಸೇರುವುದಾಗಲೀ, ಒಟ್ಟು ಪ್ರಕ್ರಿಯೆಯ ಮೌಲ್ಯಮಾಪನ ಮಾಡುವುದಾಗಲೀ ಸಾಧ್ಯವಾಗಲಿಲ್ಲ.

2. **ಯೋಜನಾ ವೆಚ್ಚದಲ್ಲಿ ಹೆಚ್ಚಳ**

ಯೋಜನಾ ವೆಚ್ಚ ಅಂದಾಜು ಮಾಡಿದ ದಿನದಿಂದ ಕಾರ್ಯಕ್ರಮ ಆರಂಭಿಸುವ ದಿನಗಳ ನಡುವೆ ಪೆಟ್ರೋಲ್/ಡೀಸೆಲ್ ಇತ್ಯಾದಿಗಳ ಬೆಲೆ ಗಮನಾರ್ಹವಾಗಿ ಹೆಚ್ಚುತ್ತಾ ಹೋದದ್ದರಿಂದ ಪ್ರಯಾಣ/ಆಹಾರ ಸಂಬಂಧೀ ವೆಚ್ಚಗಳಲ್ಲಿ ಹೆಚ್ಚಳವಾಗುತ್ತಾ ಹೋಯಿತು. ಒಟ್ಟು ಯೋಜನೆಗೆ ಅಗತ್ಯವಾದ ಮೊತ್ತದ 75%ರಷ್ಟನ್ನು ಮಾತ್ರ ಅನುದಾನದಿಂದ ನಿರ್ವಹಿಸಲು ಸಾಧ್ಯವಾಯಿತು. ಉಳಿದ ಖರ್ಚಿನ ಹೊರೆ ಸ್ವಯಂಸ್ವೇವಕರು ಹಾಗೂ ಸಮುದಾಯದ ಮೇಲೆ ಬಿತ್ತು.

3. **ತಂಡದ ಲಿಂಗಾನುಪಾತದ ಅಸಮತೋಲನ**

ಕಾರ್ಯಾಗಾರದಲ್ಲಿ ಭಾಗವಹಿಸಲು ಒಪ್ಪಿಕೊಂಡ ಒಂದಿಬ್ಬರಿಗೆ ಉದ್ಯೋಗದ ಕಾರಣಗಳಿಂದಾಗಿ ಭಾಗವಹಿಸಲು ಅಸಾಧ್ಯವಾದದ್ದು ಮತ್ತು ಸಾರ್ವಜನಿಕ ಸಾರಿಗೆ ಕ್ಷೀಣವಾದ್ದರಿಂದ ಕೆಲವು ಯುವತಿಯರಿಗೆ ಭಾಗವಹಿಸಲು ಆಗದೆ ಇದ್ದದ್ದು. ಅವರ ಬದಲಿಗೆ ತಂಡಕ್ಕೆ ಸೇರಿಸಲು ಬೇರೆ ಯುವತಿಯರಿಲ್ಲದೆ ಹೋದದ್ದರಿಂದ ಯುವಕರನ್ನೇ ಸೇರಿಸಿಕೊಳ್ಳಬೇಕಾಯಿತು. ಇದರಿಂದಾಗಿ ಲಿಂಗಾನುಪಾತದ ದೃಷ್ಟಿಯಿಂದ ತಂಡದಲ್ಲಿ ಅಸಮತೋಲನ ಉಂಟಾಯಿತು.

**ಹಮ್ಮಿಕೊಂಡ ಚಟುವಟಿಕೆಗಳು:**

| ಚಟುವಟಿಕೆ | ದಿನಾಂಕ | ಫಲಿತಾಂಶ | ಟಿಪ್ಪಣಿ |
|---|---|---|---|
| ಉದ್ಘಾಟನೆ ಹಾಗೂ ಸಂಯೋಜನಾ ಸಭೆ | 9–2–2021 | 5 ತರಬೇತುದಾರರು, 20 ಶಿಬಿರಾರ್ಥಿಗಳ ಆಯ್ಕೆ<br>ಯೋಜನೆಯ ಮರುವಿನ್ಯಾಸ | ಯೋಜನೆಯ ಉದ್ದೇಶವನ್ನು ಯಶಸ್ವಿಗೊಳಿಸುವ, ಅದನ್ನು ಬದುಕಿನಲ್ಲಿ ಅಳವಡಿಸಿಕೊಂಡು ಮುಂದುವರೆಸಿಕೊಂಡು ಹೋಗಲು ಶಿಬಿರಾರ್ಥಿಗಳು ಬದ್ಧರಾದರು. |
| ವಾದ್ಯ ನುಡಿಸುವ ಕಾರ್ಯಾಗಾರ | 10–2–2021 ರಿಂದ 28–2–2021<br>15 days | ತಂಡದ ಸಂಯೋಜಕರು ಹಾಗೂ ನಾಯಕರ ಆಯ್ಕೆ<br>ತಂಡಕ್ಕೆ ಹೆಸರಿನ ಆಯ್ಕೆ<br>ಡೋಲು, ಕೊಳಲು, ಚೆಂಡೆ, ಚವಲ ನುಡಿಸುವುದರಲ್ಲಿ ಪರಿಣಿತಿ. ವಾದ್ಯ ನುಡಿಸುವುದರಲ್ಲಿ ಅವರವರ ಸಾಮರ್ಥ್ಯಗಳ ಅರಿವು, ತಮ್ಮ ಸಮುದಾಯ ಎದುರಿಸಿರುವ ಸವಾಲುಗಳು, ತಮ್ಮ ಹಿರಿಯರು ಆ ಸವಾಲುಗಳನ್ನೆಲ್ಲಾ ಮೀರಿ ಬೆಳೆದದ್ದರ ಅರಿವು. ತಾವೂ ಸಮುದಾಯದ ಘನತೆಯನ್ನು ಎತ್ತಿ ಹಿಡಿಯಲು ಪ್ರೇರೇಪಣೆ | ಎಲ್ಲರ ಪಾಲ್ಗೊಳ್ಳುವಿಕೆಯಲ್ಲಿ **ಕೊರ್ರೆ ಕುಜೇಲ್ಲು ಕಲಾ ತಂಡ ಕುಡ್ಲ** ಎಂಬ ಹೆಸರಿನ ಆಯ್ಕೆ, ಹಾಗೂ ತರಬೇತಿ ಪ್ರಕ್ರಿಯೆಯ ನಿರ್ಧಾರ.<br>ಕೊರಗ ಭಾಷೆಯ ಉಳಿವಿನ ಬಗ್ಗೆ ಸಂವಾದ<br>ಸಮುದಾಯದ ಘನತೆಗಾಗಿ ನಡೆದ ಹೋರಾಟಗಳು ಅದರಿಂದಾದ ಪರಿಣಾಮಗಳ ಬಗ್ಗೆ ಅರಿವು. |
| ನೃತ್ಯ ಕಲಿಕೆಯ ಕಾರ್ಯಾಗಾರ | 2–3–2021 ರಿಂದ 7–3–2021<br>5days | ಕೊರಗರ ಸಂಪ್ರದಾಯಿಕ ನೃತ್ಯದ ಕಲಿಕೆ<br>ಸಮುದಾಯದ ಬದುಕಿನ ಕೆಲವು ಅಂಶಗಳನ್ನು ನೃತ್ಯದ ಮೂಲಕ ಅಭಿವ್ಯಕ್ತಿಗೊಳಿಸುವ ಸಾಮರ್ಥ್ಯ | |
| ವಾದ್ಯ+ನೃತ್ಯ ಸಂಯೋಜನೆಯ ಕಾರ್ಯಾಗಾರ | 10–3–2021 ರಿಂದ 16–3–2021<br>7days | ವಾದ್ಯಗೋಷ್ಠಿಯೊಂದಿಗೆ ನೃತ್ಯದ ಹೆಜ್ಜೆಗಳನ್ನು ಸಮನ್ವಯಗೊಳಿಸುವ ಸಾಮರ್ಥ್ಯ.<br>ಕೆಲವು ಕೊರಗ ಭಾಷೆಯ ಹಾಡುಗಳನ್ನು ಕಲಿತರು | ಸಮುದಾಯದ ಬದುಕು ಮತ್ತು ಸಂಗೀತದ ಅವಿನಾಭಾವ ಸಂಬಂಧದ ಅರಿವು ಮೂಡಿಸುವ ಪ್ರಯತ್ನ ಕಾರ್ಯಾಗಾರದಲ್ಲಾಗಿತ್ತು. |
| ಪ್ರದರ್ಶನಾಭ್ಯಾಸ/ ಪ್ರಚಾರ ಸಂಬಂಧೀ ಕ್ರಿಯೆಗಳು | 18–3–2021 ರಿಂದ 23–3–2021<br>5days | ಸಾರ್ವಜನಿಕ ಪ್ರದರ್ಶನ ನೀಡುವ ಹಂತಕ್ಕೆ ತಂಡದ ಬೆಳವಣಿಗೆ | |
| ಪ್ರದರ್ಶನಕ್ಕೆ ಪೂರ್ವ ಸಿದ್ಧತೆ/ ಪ್ರಚಾರ ಕಾರ್ಯ | 24–3–2021 ರಿಂದ 27–3–2021 | | ಪ್ರಚಾರದ ಕೆಲಸದಲ್ಲಿ ಸಂಯೋಜಕರು ಮತ್ತು ಸ್ವಯಂಸೇವಕರು ಮಾತ್ರ ತೊಡಗಿದ್ದರು. ಸಮಯದ ಅಭಾವದಿಂದ ಶಿಬಿರಾರ್ಥಿಗಳಿಗೆ ಅದರನುಭವ ನೀಡಲಾಗಿಲ್ಲ |
| ಸಾರ್ವಜನಿಕ ಪ್ರದರ್ಶನ | 28–3–2021 | ಸಮುದಾಯದ ಸುಮಾರು 100 ಮಂದಿ ಪ್ರೇಕ್ಷಕರ ಮುಂದೆ 5 ನೃತ್ಯಗಳನ್ನು ಪ್ರದರ್ಶಿಸಲಾಯಿತು.<br>ಪ್ರೇಕ್ಷಕರನ್ನೂ ಸೇರಿಸಿ ಸಮುದಾಯ ನೃತ್ಯ ಮಾಡಲಾಯಿತು.<br>ನವಕಲಾವಿದರಿಗೆ ಸಾರ್ವಜನಿಕ ಪ್ರದರ್ಶನದ ಅನುಭವ, ತಮ್ಮ ಸಾಮರ್ಥ್ಯ, ಸಾಧ್ಯತೆಗಳ ಅರಿವು ಆತ್ಮವಿಶ್ವಾಸ | ಅವರ ಪ್ರದರ್ಶನದ ಬಗ್ಗೆ ಸಮುದಾಯದಿಂದ ಹಿಮ್ಮಾಹಿತಿ, ಉತ್ತಮಪಡಿಸುವಿಕೆಗೆ ಸಲಹೆಗಳು |

## ಉದ್ಘಾಟನೆ ಹಾಗೂ ಸಂಯೋಜನಾ ಸಭೆ

9-2-2021



ಸ್ನೇಹಕುಂಜ ಟ್ರಸ್ಟ್ (ರಿ) ಹೊನ್ನಾವರ ಯುವ ಸಾಂಸ್ಕೃತಿಕ ಸಬಲೀಕರಣ ಯೋಜನೆ ಎಂಬ ಕೊರಗ ಯುವ ಜನರಿಗಾಗಿ ಕಲೆ ಸಂಸ್ಕೃತಿಗಳ ಅರಿವು ಕಾರ್ಯಕ್ರಮವನ್ನು ಕೊರಲ್ ಕಲಾ ತಂಡ (ರಿ) ಕುಡ್ಲ ಇದರ ಸಹಭಾಗಿತ್ವದಲ್ಲಿ ಕುದ್ಮುಲ್ ರಂಗರಾವ್ ಕೊರಗ ಸಭಾಭವನ ಕೋಡಿಕಲ್ ಇಲ್ಲಿ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಹಿತೈಷಿಗಳಾದ ನಟೇಶ್ ಉಳ್ಳಾಲ್‌ರವರು ಡೋಲು ಬಾರಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲರನ್ನು ರಮೇಶ್ ಗುಂಡಾವು ಇವರು ಸ್ವಾಗತ ಭಾಷಣದ ಮೂಲಕ ಸ್ವಾಗತಿಸಿದರು.

ಬಾಬು ಪಾಂಗಾಳ ಇವರು ಯೋಜನೆಯ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ನಂತರ ಎಲ್ಲರೂ ತಮ್ಮ ತಮ್ಮ ಪರಿಚಯ ಮಾಡಿಕೊಂಡರು. ನಟೇಶ್‌ರವರು ಯೋಜನೆಯ ಕಾರ್ಯಚಟುವಟಿಕೆಯ ಬಗ್ಗೆ ವಿವರವಾಗಿ ತಿಳಿಸಿದರು. ಕೊರಲ್ ಕಲಾ ತಂಡದ ಅಧ್ಯಕ್ಷರಾದ ರಮೇಶ್ ಮಂಚಕಲ್ ಇವರನ್ನು ತಂಡದ ತರಬೇತುದಾರರಾಗಿ ಆಯ್ಕೆ ಮಾಡಲಾಯಿತು. ಸಹ ತರಬೇತುದಾರರಾಗಿ ಕುಡುಪ ಸಚ್ಚೇರಿಪೇಟೆ, ಶ್ಯಾಮ್, ರಮೇಶ್ ಗುಂಡಾವು, ಎಂ.ಸುಂದರ, ಕೊಗ್ಗ ರಮೇಶ್, ಸಂಜೀವ ಕೋಡಿಕಲ್ ಇವರುಗಳನ್ನು ಆಯ್ಕೆ ಮಾಡಲಾಯಿತು. ನಂತರ ಕೊರಲ್ ಕಲಾ ತಂಡದ ಸದಸ್ಯರು ತಮ್ಮ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು. ಕಾರ್ಯಕ್ರಮಕ್ಕೆ ಹಾಗೂ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಈ ಉದ್ಘಾಟನಾ ಕಾರ್ಯಕ್ರಮದಲ್ಲಿ ತರಬೇತಿ ಪಡೆಯುವ ಒಟ್ಟು 18 ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಈ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಶುಭ ಹಾರೈಸಿ ಎಲ್ಲರಿಗೂ ಎಲ್ಲರಿಗೂ ಧನ್ಯವಾದ ಸಲ್ಲಿಸಿದರು.

ವಿದ್ಯಾರ್ಥಿಗಳಿಗೆ ಈ ದಿನದ ಊಟದ ವ್ಯವಸ್ಥೆಯನ್ನು ಹಾಗೂ ಭತ್ಯೆಯನ್ನು ನೀಡಲಾಯಿತು.

## ವಾದ್ಯ ನುಡಿಸುವ ಕಾರ್ಯಾಗಾರ 10-2-2021 ರಿಂದ 28-2-2021



10-2-2021

ದಿನಾಂಕ 10-2-2021 ರಂದು ಮೊದಲ ದಿನದ ತರಬೇತಿಯನ್ನು ರಮೇಶ್ ಗುಂಡಾವುರವರು ಸ್ವಾಗತಿಸಿದರು. ತಂಡದ ರಚನೆಯ ಬಗ್ಗೆ ಚರ್ಚೆ ನಡೆಸಲಾಯಿತು. ತಂಡದ ಮೇಲ್ವಿಚಾರಕರಾಗಿ ರೂಪಾ ಮತ್ತು ಲೇಖರಾಜ್ ರವರನ್ನು ಆಯ್ಕೆ ಮಾಡಲಾಯಿತು. ತಂಡದ ನಾಯಕನಾಗಿ ಸಾಯಿರಾಜ್ ರವರನ್ನು ಆಯ್ಕೆ ಮಾಡಲಾಯಿತು. ನಂತರ ತಂಡದ ಸದಸ್ಯರಲ್ಲಿ ತಂಡಕ್ಕೆ ಹೆಸರನ್ನು ಸೂಚಿಸುವಂತೆ ಹೇಳಲಾಯಿತು. ತಂಡದ ಎಲ್ಲಾ ಸದಸ್ಯರು ಚರ್ಚಿಸಿ 3 ಹೆಸರುಗಳನ್ನು ತಿಳಿಸಿದರು.

1. ಕೊರಗ ಯುವ ಜನರ ಕಲಾವೇದಿಕೆ
2. ಕೊರ್ರೆ ಕುಜೇಲ್ಲು ಕಲಾ ತಂಡ ಕುಡ್ಲ
3. ಕಡ್ಡಾಯಿ ಕರಂಡೆ ಕಲಾ ಕೂಟ ಕುಡ್ಲ

ಈ ಮೂರು ಹೆಸರುಗಳಲ್ಲಿ "**ಕೊರ್ರೆ ಕುಜೇಲ್ಲು ಕಲಾ ತಂಡ ಕುಡ್ಲ**" ಎಂಬ ಹೆಸರನ್ನು ಸದಸ್ಯರೆಲ್ಲರ ಒಪ್ಪಿಗೆಯ ಮೇರೆಗೆ ಆಯ್ಕೆ ಮಾಡಲಾಯಿತು.



ನಂತರ ಕುಡುಪ ಸಚ್ಚೇರಿಪೇಟೆ ಹಾಗೂ ರಮೇಶ್ ಮಂಚಕಲ್ ರವರು ಮೊದಲಿಗೆ ಡೋಲಿನ ಹಲವು ಬಗೆಯ ಟಕ್ಕುಗಳ ಬಗ್ಗೆ ಡೋಲು ಬಾರಿಸುವ ಮೂಲಕ ಪರಿಚಯಿಸಿ ಕೊಟ್ಟರು. ಮೊದಲು ಬಂದು ಡೋಲು ಮುಟ್ಟಿ ನಮಸ್ಕರಿಸುವುದು, ಹೇಗೆ ಹೆಗಲಿಗೆ ಹಾಕಿಕೊಳ್ಳುವುದು ಎಂಬುದನ್ನು ತಿಳಿಸಿಕೊಟ್ಟರು. ನಂತರ ಹಲವು ಬಗೆಯ ಟಕ್ಕುಗಳನ್ನು ಒಂದೊಂದಾಗಿ ಪರಿಚಯಿಸಿದರು. ಮೊದಲು ಪ್ರಾರಂಭಿಸುವುದು ಮತ್ತು ಕೊನೆಗೊಳಿಸುವುದು ಹೇಗೆ ಎಂಬುದನ್ನು 3 ಡೋಲುಗಳ ಮೂಲಕ 2–2 ವಿದ್ಯಾರ್ಥಿಗಳಿಗೆ ಕಲಿಸಿಕೊಟ್ಟರು.

ದಿನದ ಕೊನೆಯಲ್ಲಿ ತಂಡದ ವಿದ್ಯಾರ್ಥಿಗಳಿಗೆ ಮತ್ತು ತರಬೇತಿ ನೀಡುವವರಿಗೂ ರಮೇಶ್ ಗುಂಡಾವುರವರು ಧನ್ಯವಾದ ತಿಳಿಸಿದರು,

11–2–2021

ದಿನಾಂಕ 11–2–2021 ರಂದು ಎರಡನೆಯ ದಿನದ ತರಬೇತಿಯನ್ನು ರಮೇಶ್ ಗುಂಡಾವುರವರು ತರಬೇತಿಗೆ ಹಾಜರಾದ ವಿದ್ಯಾರ್ಥಿಗಳಿಗೆ ಮತ್ತು ತರಬೇತುದಾರರಿಗೆ ಸ್ವಾಗತವನ್ನು ಕೋರಿದರು. ಮೊದಲಿಗೆ ಡೋಲಿನ ತರಬೇತಿಯನ್ನು ಪ್ರಾರಂಭಿಸಿದರು. ರಮೇಶ್ ಮಂಚಕಲ್ ರವರು ಡೋಲು ಬಾರಿಸಲು ಪ್ರಾರಂಭಿಸುವ ಟಕ್ಕನ್ನು ಡೋಲು ಬಾರಿಸುವ ಮೂಲಕ ವಿದ್ಯಾರ್ಥಿಗಳಿಗೆ ಹೇಳಿದರು. ವಿವಿಧ ರೀತಿಯ ಪ್ರಾರಂಭದ ಟಕ್ಕನ್ನು ಕಲಿಸಿಕೊಟ್ಟರು. ನಂತರ ಜೋಡಿಯಾಗಿ ಕರೆದು ಡೋಲು ಬಾರಿಸುವ ತರಬೇತಿ ನೀಡಿದರು. ಜೊತೆಗೆ ವಿವಿಧ ಟಕ್ಕಿನ ಮಹತ್ವವನ್ನು ತಿಳಿಸಿಕೊಟ್ಟರು. ಯಾವ ಸಂದರ್ಭಕ್ಕೆ ತಕ್ಕಂತೆ ಯಾವ ರೀತಿಯ ಟಕ್ಕನ್ನು ಬಾರಿಸಬೇಕು ಎಂಬುದನ್ನು ಬಹಳ ಅರ್ಥ ಪೂರ್ಣವಾಗಿ ತಿಳಿಸಿಕೊಟ್ಟರು. ನಂತರ ಚೆಂಡೆ ಮತ್ತು ಚಾವಲವನ್ನು ಉಳಿದ ವಿದ್ಯಾರ್ಥಿಗಳಿಗೆ ಕಲಿಸಿಕೊಟ್ಟರು ಹಾಗೂ ಕೊಳಲು ಕೂಡ ಊದುವಂತೆ ಪ್ರೇರೇಪಿಸಿದರು.



ತರಬೇತಿ ಕುದ್ಮುಲ್ ರಂಗರಾವ್ ಕೊರಗ ಸಮುದಾಯ ಭವನ ಕೋಡಿಕಲ್ ನಲ್ಲಿ ನಡೆಯಿತು. ಕೊನೆಗೆ ಕಾರ್ಯಕ್ರಮದ ದನ್ಯವಾದವನ್ನು ಸಾಯಿರಾಜ್‌ರವರು ನೆರವೇರಿಸಿದರು.



12–2–2021



ದಿನಾಂಕ 12–2–2021 ರಂದು ರಮೇಶ್ ಗುಂಡಾವುರವರು ತರಬೇತಿಗೆ ಹಾಜರಾದ ವಿದ್ಯಾರ್ಥಿಗಳಿಗೆ ಮತ್ತು ತರಬೇತುದಾರರಿಗೆ ಸ್ವಾಗತವನ್ನು ಕೋರಿದರು. ರಮೇಶ್ ಮಂಚಕಲ್ ರವರು ತರಬೇತಿ ನೀಡಿದರು . ಇವತ್ತೂ ಕೂಡ ಜೋಡಿಯಾಗಿ ಕರೆದು ಡೋಲು ಬಾರಿಸುವ ತರಬೇತಿ ನೀಡಿದರು.

ತರಬೇತಿ ಕುದ್ಮುಲ್ ರಂಗರಾವ್ ಕೊರಗ ಸಮುದಾಯ ಭವನ ಕೋಡಿಕಲ್ ನಲ್ಲಿ ನಡೆಯಿತು. ಕೊನೆಗೆ ಕಾರ್ಯಕ್ರಮದ ದನ್ಯವಾದವನ್ನು ಸಾಯಿರಾಜ್ ರವರು ನೆರವೇರಿಸಿದರು.

13–2–2021

ದಿನಾಂಕ 13–2–2021 ರಂದು ರಮೇಶ್ ಮಂಚಕಲ್ ರವರು ಸ್ವಾಗತವನ್ನು ಕೋರಿದರು. ಡೋಲಿನ ತರಬೇತಿಯನ್ನು ಪ್ರಾರಂಭಿಸಿದರು. ಹಿಂದಿನ ದಿನ ಕಲಿಸಲಾದ ಟಕ್ಕುಗಳನ್ನು ಅಭ್ಯಸಿಸಲಾಯಿತು.

ಕೊನೆಗೆ ಕಾರ್ಯಕ್ರಮದ ದನ್ಯವಾದವನ್ನು ರಮೇಶ್ ಗುಂಡಾವುರವರು ನೆರವೇರಿಸಿದರು.







14–2–2021

ದಿನಾಂಕ 14–2–2021 ರಂದು ದಿನದ ತರಬೇತಿಯನ್ನು ವಿದ್ಯಾರ್ಥಿಗಳು ಡೋಲು ಬಡಿಯುವುದನ್ನು ಅಭ್ಯಸಿಸುವುದರೊಂದಿಗೆ ಆರಂಭಿಸಲಾಯಿತು. ಕೊನೆಗೆ ರೂಪಾ ಎಲ್ಲರಿಗೂ ಧನ್ಯವಾದ ಅರ್ಪಿಸಿದರು.

ಈ ದಿನದ ವಿದ್ಯಾರ್ಥಿಗಳ ದಿನದ ಭತ್ಯೆ ಮತ್ತು ಊಟದ ವ್ಯವಸ್ಥೆಯನ್ನು ಮಾಡಲಾಯಿತು.

15–2–2021

ದಿನಾಂಕ 15–2–2021 ರಂದು ರಮೇಶ್ ಗುಂಡಾವುರವರು ತರಬೇತಿಗೆ ಹಾಜರಾದ ವಿದ್ಯಾರ್ಥಿಗಳಿಗೆ ಮತ್ತು ತರಬೇತುದಾರರಿಗೆ ಸ್ವಾಗತವನ್ನು ಕೋರಿದರು. ನಂತರ ಜೋಡಿಯಾಗಿ ಕರೆದು ಡೋಲು ಬಾರಿಸುವ ತರಬೇತಿ ನೀಡಿದರು. ನಂತರ ಚೆಂಡೆ ಮತ್ತು ಚಾವಲ ಹಾಗೂ ಕೊಳಲು ಊದುವುದನ್ನು ಕೂಡಾ ಹೇಳಿಕೊಟ್ಟರು.



ತರಬೇತಿ ಕುದ್ಮುಲ್ ರಂಗರಾವ್ ಕೊರಗ ಸಮುದಾಯ ಭವನ ಕೋಡಿಕಲ್ ನಲ್ಲಿ ನಡೆಯಿತು. ಕೊನೆಗೆ ಕಾರ್ಯಕ್ರಮದ ದನ್ಯವಾದವನ್ನು ಲೇಖರಾಜ್ ರವರು ನೆರವೇರಿಸಿದರು.








16–2–2021

ದಿನಾಂಕ 16–2–2021 ರಂದು ಕೊರಲ್ ಕಲಾ ತಂಡದ ಸದಸ್ಯರಾದ ರಾಜು ಮಂಚಕಲ್ ರವರು ಕೊಳಲು ಊದುವುದರ ಮೂಲಕ ತರಬೇತಿಯನ್ನು ಆರಂಭಿಸಲಾಯಿತು. ನಂತರ ವಿದ್ಯಾರ್ಥಿಗಳು ಡೋಲು ಬಾರಿಸುವ ಅಭ್ಯಾಸದಲ್ಲಿ ತೊಡಗಿಸಿಕೊಂಡರು. ಈ ದಿನ ತರಬೇತಿಯನ್ನು ಕೊರಲ್ ಕಲಾ ತಂಡದ ಸದಸ್ಯರಾದ ಎಂ.ಸುಂದರ, ರಾಜು ಮಂಚಕಲ್, ಹರೀಶ್ ಅತ್ತೂರು, ಬಾಲ್ ರಾಜ್ ಕೋಡಿಕಲ್ ರವರು ನೀಡಿದರು. ಅಲ್ಲದೆ ಟಕ್ಕುಗಳನ್ನು ಅಭ್ಯಸಿಸುತ್ತಿದ್ದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವುದರೊಂದಿಗೆ ಲಯಬದ್ದವಾಗಿ ಬಾರಿಸುವಂತೆ ಸಲಹೆ ನೀಡಿದರು.

17–2–2021





ದಿನಾಂಕ 17–2–2021 ರಂದು ತರಬೇತಿಯನ್ನು ರಮೇಶ್ ಮಂಚಕಲ್ ರವರು ನೀಡಿದರು. ವಿವಿಧ ಟಕ್ಕುಗಳನ್ನು ಕಲಿಸಿಕೊಟ್ಟರು. ವಿದ್ಯಾರ್ಥಿಗಳು ಟಕ್ಕುಗಳನ್ನು ಅಭ್ಯಸಿಸಿದರು.

ತರಬೇತಿ ಕುದ್ಮುಲ್ ರಂಗರಾವ್ ಕೊರಗ ಸಮುದಾಯ ಭವನ ಕೋಡಿಕಲ್ ನಲ್ಲಿ ನಡೆಯಿತು. ಕೊನೆಗೆ ಕಾರ್ಯಕ್ರಮದ ದನ್ಯವಾದವನ್ನು ರಮೇಶ್ ಗುಂಡಾವುರವರು ರವರು ನೆರವೇರಿಸಿದರು.





18–2–2021

ದಿನಾಂಕ 18–2–2021 ರಂದು ಲೇಖರಾಜ್ ರವರು ತರಬೇತಿಗೆ ಹಾಜರಾದ ವಿದ್ಯಾರ್ಥಿಗಳಿಗೆ ಮತ್ತು ತರಬೇತುದಾರರಿಗೆ ಸ್ವಾಗತವನ್ನು ಕೋರಿದರು. ಈ ದಿನ ಕಲಿತ ಟಕ್ಕುಗಳನ್ನು ಅಭ್ಯಾಸಿಸಲಾಯಿತು. ತರಬೇತಿಯ ಎಲ್ಲಾ ವಿದ್ಯಾರ್ಥಿಗಳು 15–15 ನಿಮಿಷಗಳ ಕಾಲ ಡೋಲು(ಟಕ್ಕ್) ಬಾರಿಸುವ ಮೂಲಕ ಕಲಿತುಕೊಂಡರು. ಚೆಂಡೆ ಹಾಗೂ ಚಾವಲವನ್ನು ಡೋಲಿನ ಟಕ್ಕಿಗೆ ಸರಿ ಸಮಾನವಾಗಿ ಹೇಗೆ ಬಾರಿಸಬೇಕು ಹೇಗೆ ನಿಲ್ಲಿಸಬೇಕು ಎಂಬುದನ್ನು ಹೇಳಿಕೊಟ್ಟರು.

ಕೊನೆಗೆ ಕಾರ್ಯಕ್ರಮದ ದನ್ಯವಾದವನ್ನು ಸಾಯಿರಾಜ್ ರವರು ನೆರವೇರಿಸಿದರು.



19–2–2021

ದಿನಾಂಕ 19–2–2021 ರಂದು ಮೊದಲಿಗೆ ರಮೇಶ್ ಗುಂಡಾವುರವರು ತರಬೇತಿಗೆ ಹಾಜರಾದ ವಿದ್ಯಾರ್ಥಿಗಳಿಗೆ ಮತ್ತು ತರಬೇತುದಾರರಿಗೆ ಸ್ವಾಗತವನ್ನು ಕೋರಿದರು. ಡೋಲಿನ ತರಬೇತಿಯನ್ನು ಪ್ರಾರಂಭಿಸಿದರು. ಕಲಿತ ಟಕ್ಕುಗಳನ್ನು ಇಂದು ಕೂಡ ಅಭ್ಯಾಸ ಮಾಡಲಾಯಿತು.

ಕೊನೆಗೆ ಕಾರ್ಯಕ್ರಮದ ದನ್ಯವಾದವನ್ನು ರಮೇಶ್ ಮಂಚಕಲ್ ರವರು ನೆರವೇರಿಸಿದರು.





20–2–2021

ದಿನಾಂಕ 20–2–2021 ರಂದು ಕುದ್ಮುಲ್ ರಂಗರಾವ್ ಕೊರಗ ಸಮುದಾಯ ಭವನದಲ್ಲಿ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ದಿನದ ತರಬೇತಿಗೆ ಬಂದ ಎಲ್ಲರಿಗೂ ಲೇಖರಾಜ್ ರವರು ಸ್ವಾಗತವನ್ನು ಮಾಡಿದರು. ನಂತರ ಕಲಾ ತಂಡದ ಎಲ್ಲಾ ವಿದ್ಯಾರ್ಥಿಗಳಲ್ಲಿ ಡೋಲು ಬಾರಿಸುವ ಬಗ್ಗೆ ಅನುಭವವನ್ನು ಹಾಗೂ ಮಾಹಿತಿಯನ್ನು ಕೇಳಲಾಯಿತು. ಎಲ್ಲಾ ವಿದ್ಯಾರ್ಥಿಗಳು ತಮ್ಮ ತಮ್ಮ ಅನುಭವವನ್ನು ತಿಳಿಸಿದರು.



ಕೆಲವೊಂದು ಟಕ್ಕುಗಳನ್ನು ನಿಧಾನವಾಗಿ ಅಭ್ಯಾಸ ಮಾಡಲಾಯಿತು. ಈ ದಿನದ ತರಬೇತಿಯನ್ನು ರಮೇಶ್ ಮಂಚಕಲ್ ಮತ್ತು ಎಂ.ಸುಂದರ ರವರು ನಡೆಸಿದರು. ಜೊತೆಗೆ ನೃತ್ಯ, ವೇದಿಕೆ ಕಾರ್ಯಕ್ರಮಗಳ ಬಗ್ಗೆ ಮಾತನಾಡಲಾಯಿತು. ಅದಕ್ಕಾಗಿ ಕೆಲವು ವೇದಿಕೆ ಪ್ರದರ್ಶನ ಕೊಡಲು ಆಯ್ದ ಟಕ್ಕುಗಳನ್ನು ಕಲಿಸಿಕೊಟ್ಟರು.

**ವಾದ್ಯ ನುಡಿಸುವ ಕಾರ್ಯಾಗಾರ ಹಂತ** 2 24–2–2021 **ರಿಂದ** 28–2–2021

ದಿನಾಂಕ 24–2–2021 ರಂದು ತರಬೇತಿಯ ಮೊದಲಿಗೆ ರಮೇಶ್ ಗುಂಡಾವುರವರು ಎಲ್ಲರಿಗೂ ಸ್ವಾಗತವನ್ನು ಮಾಡಿದರು. ದಿನದ ತರಬೇತಿಯಲ್ಲಿ 3–3 ವಿದ್ಯಾರ್ಥಿಗಳ ಒಂದು ತಂಡವಾಗಿ ವಿಂಗಡಿಸಿ ಅವರಿಗೆ ಡೋಲಿನ ಟಕ್ಕನ್ನು ಬಾರಿಸಲು ತಿಳಿಸಲಾಯಿತು. ಕೆಲವೊಂದು ವಿದ್ಯಾರ್ಥಿಗಳು ಶೀಘ್ರವಾಗಿ ಕಲಿತುಕೊಂಡರು ಇನ್ನು ಕೆಲವು ವಿದ್ಯಾರ್ಥಿಗಳು ಕಲಿಯಲು ಸ್ವಲ್ಪ ಸಮಯ ತೆಗೆದುಕೊಂಡರು. ತರಬೇತುದಾರರಿಂದ ಬೇಗವಾಗಿ ಕಲಿತ ವಿದ್ಯಾರ್ಥಿಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದರೆ ಇನ್ನು ಕಲಿಯಲು ಇರುವ ವಿದ್ಯಾರ್ಥಿಗಳಿಗೆ ಹೆಚ್ಚು ಒತ್ತು ನೀಡುವ ಮೂಲಕ ತರಬೇತಿಯನ್ನು ನೀಡಿದರು. ನಂತರ ಡೋಲಿನ ಟಕ್ಕುಗಳನ್ನು ಪರಿಚಯಿಸಿದರು ಹಾಗೂ ಕೆಲವೊಂದು ಟಕ್ಕನ್ನು ವಿದ್ಯಾರ್ಥಿಗಳಿಗೆ  ಬಾರಿಸುವಂತೆ ಹೇಳಿದರು. ಕ್ರಮವಾಗಿ 25–2–2021, 26–2–2021, 27–2–2021 ದಿನದಂದು ಕೂಡಾ ವಿದ್ಯಾರ್ಥಿಗಳು ಕೊರಲ್ ಕಲಾ ತಂಡದ ಸದಸ್ಯರೊಂದಿಗೆ ಸೇರಿ  ಟಕ್ಕುಗಳನ್ನು ಅಭ್ಯಸಿಸಿದರು.

ದಿನಾಂಕ 28–2–2021 ರಂದು ತರಬೇತಿಯನ್ನು ರಮೇಶ್ ಗುಂಡಾವುರವರು ಸ್ವಾಗತಿಸಿದರು. ಈ ದಿನದಂದು ಮೊದಲಿಗೆ ಡ್ಯಾನ್ಸ್ ಪ್ರಾಕ್ಟೀಸ್ ಬಗ್ಗೆ ಚರ್ಚಿಸಲಾಯಿತು. ಹಾಗೂ ವೇದಿಕೆ ಪ್ರದರ್ಶನ ಬಗ್ಗೆ ದಿನಾಂಕ ನಿಗದಿ ಮಾಡಲಾಯಿತು. ಹಾಗೂ ಕೆಲವೊಂದು ಸಾಂಪ್ರದಾಯಿಕ ಡ್ಯಾನ್ಸ್ ಗಳ ಬಗ್ಗೆ ಚರ್ಚಿಸಲಾಯಿತು.

ನಂತರ ಅಜಲು ನಿಷೇಧ ಕಾನೂನು ಜಾರಿಗೆ ತರಲು ನಡೆದ ಹೋರಾಟ, ಅದರ ಸಾಧಕ ಭಾದಕ ಹಾಗೂ ಹೋರಾಟದ ಪರಿಣಾಮ ಪ್ರಪ್ರಥಮವಾಗಿ ಕೊರಲ್ ಕಲಾ ತಂಡ ಕುಡ್ಲ ಎಂಬ ಸಾಂಸ್ಕೃತಿಕ ಕಲಾ ತಂಡವನ್ನು ಸ್ಥಾಪಿಸಿದ ಬಗ್ಗೆ ಸುದೀರ್ಘವಾಗಿ ಬಾಬು ಪಾಂಗಾಳರವರು ತಿಳಿಸಿಕೊಟ್ಟರು. ಈ ದಿನ ನಟೇಶ್ ಹಾಗೂ ವಿದ್ಯಾರವರು ತರಬೇತಿಯನ್ನು ವೀಕ್ಷಿಸಲು ಆಗಮಿಸಿದ್ದರು. ತರಬೇತಿ ಹೇಗೆ ನಡೆಯುತ್ತಿದೆ ಎಂದು ಕೇಳಿ ಖಚಿತ ಪಡಿಸಿಕೊಂಡರು. ಅನಂತರ ವಿದ್ಯಾರ್ಥಿಗಳು ಅವರ ಮುಂದೆ ತಾವು ಕಲಿತ ಡೋಲಿನ ಟಕ್ಕುಗಳನ್ನು ಪ್ರದರ್ಶಿಸಿದರು ಹಾಗೂ ನಟೇಶ್ ಸರ್ ರವರು ವಿದ್ಯಾರ್ಥಿಗಳ ತರಬೇತಿಯನ್ನು ಚಿತ್ರೀಕರಿಸಿದರು. ನಂತರ ಕೊರಗ ಭಾಷೆಯ ಬಗ್ಗೆ ರಮೇಶ್ ಮಂಚಕಲ್ ಮತ್ತು ಎಂ.ಸುಂದರರವರು ವಿವರವಾಗಿ ತಿಳಿಸಿದರು. ನಂತರ ಮದ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಯಿತು ಮತ್ತು ನಟೇಶ್ ರವರು ತರಬೇತಿಯ ಲೆಕ್ಕಾಚಾರದ ಬಗ್ಗೆ, ರಿಪೋರ್ಟಿಂಗ್‌ನ ಬಗ್ಗೆ ಲೇಖರಾಜ್, ರೂಪಾ ಮತ್ತು ಸಾಯಿರಾಜ್ ರವರನ್ನು ಕರೆದು ವಿವರವಾಗಿ ತಿಳಿಸಿಕೊಟ್ಟರು. ಮದ್ಯಾಹ್ನದ ಊಟದ ನಂತರ ಮತ್ತೆ ಡೋಲಿನ ಟಕ್ಕುಗಳನ್ನು ಕುಡುಪ ಸಚ್ಚೇರಿಪೇಟೆರವರು ಪ್ರತಿಯೊಬ್ಬರನ್ನು ಸಭೆಯ ಮಧ್ಯಕ್ಕೆ ಕರೆದು ಹೇಳಿಕೊಟ್ಟರು. ವಿದ್ಯಾರ್ಥಿಗಳು ಡೋಲಿನ ತರಬೇತಿಯ ಬಗ್ಗೆ ತಮ್ಮ ತಮ್ಮ ಅನುಭವವನ್ನು ಹಂಚಿಕೊಂಡರು. ಕೊನೆಗೆ ನಟೇಶ್ ಹಾಗೂ ವಿದ್ಯಾರವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿ ಈ ದಿನದ ತರಬೇತಿಯನ್ನು ಮುಗಿಸಲಾಯಿತು. ತರಬೇತಿ ಕುದ್ಮುಲ್ ರಂಗರಾವ್ ಕೊರಗ ಸಮುದಾಯ ಭವನ ಕೋಡಿಕಲ್ ನಲ್ಲಿ ನಡೆಯಿತು.





**ನೃತ್ಯ ಕಲಿಕೆಯ ಕಾರ್ಯಾಗಾರ 3–3–2021 ರಿಂದ 7–3–2021**

3–3–2021





ದಿನಾಂಕ 3–3–2021 ರಿಂದ ನೃತ್ಯ ಅಭ್ಯಾಸವನ್ನು ಪ್ರಾರಂಭಿಸಲಾಯಿತು. ವೇದಿಕೆ ಪ್ರದರ್ಶನದ ಬಗ್ಗೆ ಚರ್ಚಿಸಲಾಯಿತು. ಹಾಗೂ ವೇದಿಕೆ ಪ್ರದರ್ಶನಕ್ಕೆ ದಿನಾಂಕ ನಿಗದಿ ಮಾಡಲು ವಿದ್ಯಾರ್ಥಿಗಳು, ತರಬೇತುದಾರರು ಮತ್ತು ಕೊರಲ್ ಕಲಾ ತಂಡದ ಇತರ ಸದಸ್ಯರಲ್ಲಿ ಸಲಹೆ ಕೇಳಲಾಯಿತು. ವೇದಿಕೆ ಪ್ರದರ್ಶನಕ್ಕೆ ತಯಾರಿ ಮಾಡುವ ನಿಟ್ಟಿನಿಂದ ವಿದ್ಯಾರ್ಥಿಗಳನ್ನು ಎರಡು ತಂಡವಾಗಿ ವಿಂಗಡಿಸಿದರು. ಡೋಲು, ಚೆಂಡೆ, ಚಾವಲ, ಕೊಳಲು ವಾದನ ನುಡಿಸಲು ಪ್ರಕೃತಿ, ಅಕ್ಷಯ್, ಸಂಪತ್, ಜಯಂತ್, ಲೇಖರಾಜ್ ರವರನ್ನು ಒಂದು ತಂಡಮತ್ತು ಉಳಿದ ವಿದ್ಯಾರ್ಥಿಗಳಾದ ಸಾಯಿರಾಜ್, ರೂಪಾ, ರಾಧಾ, ಶಕೀಲ, ಶ್ವೇತ, ಶಿವರಾಜ್, ಲೋಕೇಶ್, ದೇವರಾಜ್, ಗಣೇಶ್, ರಾಘವೇಂದ್ರ, ರಾಜೇಶ್, ಸುಕೇಶ್, ಅತೀಕ್ಷ, ಭೂಮಿಕಾ, ಪ್ರಮೀಳ ಇವರನ್ನು ನೃತ್ಯ ಮಾಡಲು ಒಂದು ತಂಡವಾಗಿ ವಿಂಗಡಿಸಿದರು. ವೇದಿಕೆ ಪ್ರದರ್ಶನಕ್ಕಾಗಿ ಐದು ಬಗೆಯ ನೃತ್ಯವನ್ನು ಮಾಡಲು ತೀರ್ಮಾನಿಸಲಾಯಿತು.

1.ಸ್ವಾಗತ ನೃತ್ಯ
2.ಕಾಡಿಗೆ ಹೋಗಿ ಬಿಳಲು ತೆಗೆದು ತರುವ ನೃತ್ಯ
3.ಹೆಣ್ಣು ಮಗು ಜನಿಸಿದಾಗ ಸಂಭ್ರಮ ಪಡುವ ದೃಶ್ಯದ ನೃತ್ಯ
4.ಕೆಡ್ಡಸ ನೃತ್ಯ
5.ಕೊರ್ರೆ ಕೊಸ್ಕೆ (ಕೊರಗರ ಸಾಮೂಹಿಕ ನೃತ್ಯ)

ಈ ದಿನದ ನೃತ್ಯ ಅಭ್ಯಾಸದ ತರಬೇತುದಾರರಾಗಿ ಕೊಗ್ಗ ರಮೇಶ್, ರವಿ ಕೈಕಂಬ ಹಾಗೂ ಕೊರಲ್ ಕಲಾ ತಂಡದ ಇತರ ಸದಸ್ಯರು ಕೂಡ ವಿದ್ಯಾರ್ಥಿಗಳಿಗೆ ನೃತ್ಯ ತರಬೇತಿ ನೀಡುವಲ್ಲಿ ಸಹಕರಿಸಿದರು. ನೃತ್ಯ ಪ್ರಕಾರಗಳಲ್ಲಿ ಮೊದಲನೆಯದಾಗಿ ಸ್ವಾಗತ ನೃತ್ಯ, ಇದಕ್ಕೆ ಒಂದು ತಂಡವಾಗಿ ಮಾಡಿ ಕಲಿಸಿಕೊಡಲಾಯಿತು. ಡೋಲು ವಾದನಕ್ಕೆ ತಕ್ಕಂತೆ ನೃತ್ಯವನ್ನು ಸಂಯೋಜಿಸಲಾಯಿತು. ಕೊಗ್ಗರಮೇಶ್ ಹಾಗೂ ರಮೇಶ್ ಮಂಚಕಲ್ ರವರು ನೃತ್ಯವನ್ನು ಕಲಿಸಿಕೊಟ್ಟರು.

4–3–2021





ದಿನಾಂಕ 4–3–2021 ರ ತರಬೇತಿಯನ್ನು ನೃತ್ಯ ಅಭ್ಯಾಸದಿಂದ ಪ್ರಾರಂಭಿಸಲಾಯಿತು. ರಮೇಶ್ ಮಂಚಕಲ್ ರವರು ವಿದ್ಯಾರ್ಥಿಗಳೊಂದಿಗೆ ನೃತ್ಯ ಮಾಡಿದರು. ಕೆಲವೊಂದು ಹೊಸ ಹೊಸ ಹೆಜ್ಜೆಯನ್ನು ರಮೇಶ್ ಗುಂಡಾವುರವರು ಕಲಿಸಿಕೊಟ್ಟರು. ಕೆಲವು ವಿದ್ಯಾರ್ಥಿಗಳಲ್ಲಿ ನೃತ್ಯ ಅಭ್ಯಾಸ ಮಾಡಲು ಕೆಲವರು ಹೆಚ್ಚು , ಕೆಲವರು ಸ್ವಲ್ಪ ಸಮಯವನ್ನು ತೆಗೆದುಕೊಂಡರು. ಈ ದಿನ ಎರಡನೇ ನೃತ್ಯ ಕಾಡಿಗೆ ಹೋಗಿ ಬಿಳಲು ತೆಗೆಯುವ ದೃಶ್ಯವನ್ನು ನೃತ್ಯ ರೂಪಕದ ಮೂಲಕ ಅಭ್ಯಾಸಿಸಲಾಯಿತು. ವಿದ್ಯಾರ್ಥಿಗಳು ಕೂಡ ನಿಧಾನವಾಗಿ ಹೆಜ್ಜೆಗಳನ್ನು ಕಲಿತುಕೊಂಡರು., ಹಾಗೂ ರಮೇಶ್ ಮಂಚಕಲ್ ರವರು ಡೋಲಿನ ಟಕ್ಕುಗಳನ್ನು ನೃತ್ಯದ ಹೆಜ್ಜೆಗೆ ತಕ್ಕಂತೆ ಬಡಿಯುವಂತೆ ಹೇಳಿಕೊಟ್ಟರು.



5–3–2021

ದಿನಾಂಕ 5–3–2021 ರಂದು ಕೂಡ ನೃತ್ಯ ಅಭ್ಯಾಸವನ್ನು ಪ್ರಾರಂಭಿಸಲಾಯಿತು. ವಿದ್ಯಾರ್ಥಿಗಳು ನೃತ್ಯವನ್ನು ಅಭ್ಯಾಸಿಸಿದರು. ಈ ದಿನ ಕೂಡ ಕಾಡಿಗೆ ಹೋಗಿ ಬಿಳಲು ತೆಗೆಯುವ ದೃಶ್ಯವನ್ನು ನೃತ್ಯ ರೂಪಕದ ಮೂಲಕ ಅಭ್ಯಾಸಿಸಲಾಯಿತು. ವಿದ್ಯಾರ್ಥಿಗಳು ಕೂಡ ನಿಧಾನವಾಗಿ ಹೆಜ್ಜೆಗಳನ್ನು ಕಲಿತುಕೊಂಡರು. ಕೊರಲ್ ಕಲಾ ತಂಡದ ಸದಸ್ಯರು ಬೇಗನೆ ಕಲಿಯುವಂತಹ ನೃತ್ಯದ ಹೆಜ್ಜೆಗಳನ್ನು ಕಲಿಸಿಕೊಟ್ಟರು. ಹಾಗೆ ಡೋಲಿನ ಟಕ್ಕುಗಳನ್ನು ಕೂಡ ನೃತ್ಯದ ಹೆಜ್ಜೆಗೆ ತಕ್ಕಂತೆ ಬಡಿಯುವಂತೆ ಹಾಗೂ ಕೊಳಲು, ಚೆಂಡೆ, ಚಾವಲದ ಅಭ್ಯಾಸವನ್ನು ಕಲಿಸಿದರು. ನಂತರ ತರಬೇತಿಯನ್ನು ಮುಗಿಸಲಾಯಿತು.

6–3–2021

ದಿನಾಂಕ 6–3–2021 ರಂದು ನೃತ್ಯ ಅಭ್ಯಾಸವನ್ನು ಪ್ರಾರಂಭಿಸಲಾಯಿತು. ಇಂದಿನ ನೃತ್ಯ ಅಭ್ಯಾಸಕ್ಕೆ ಕೊರಲ್ ಕಲಾ ತಂಡದ ಸದಸ್ಯರುಗಳಾದ  ಮಲ್ಲಿಕಾ, ಗೀತಾ, ಮಾಲತಿ ಇವರುಗಳು ಕೂಡ 3ನೇ ನೃತ್ಯ ಅಭ್ಯಾಸಕ್ಕೆ ತರಬೇತಿಯಲ್ಲಿ ಭಾಗವಹಿಸಿದ್ದರು. 3ನೇ ನೃತ್ಯ ಹೆಣ್ಣು ಮಗು ಹುಟ್ಟಿದಾಗ ಮಾಡುವ ನೃತ್ಯವನ್ನು ವಿದ್ಯಾರ್ಥಿಗಳೊಂದಿಗೆ ಸೇರಿ ನೃತ್ಯ ಮಾಡಿ ಹೇಳಿಕೊಟ್ಟರು. ಈ ನೃತ್ಯಕ್ಕೆ ಒಂದು ತಂಡವನ್ನು ರಚಿಸಿದರು ಹಾಗೂ ಈ ನೃತ್ಯದ ಮಹತ್ವವನ್ನು ವಿವರವಾಗಿ ರಮೇಶ್ ಮಂಚಕಲ್ ಮತ್ತು ರಮೇಶ್ ಗುಂಡಾವು ರವರು ವಿವರಿಸಿ ಹೇಳಿದರು. ಅರ್ಥ ಮಾಡಿಕೊಂಡು ನೃತ್ಯ ಅಭ್ಯಾಸ ಮಾಡಲು ಸಹಾಯ ಮಾಡಿದರು. ಈ ನೃತ್ಯವನ್ನು ನಮ್ಮದೇ ಆದ ಕೊರಗ ಭಾಷೆಯ ಹಾಡಿನೊಂದಿಗೆ ಅಭ್ಯಾಸ ಮಾಡಲಾಯಿತು. ರಮೇಶ್ ಮಂಚಕಲ್ ಮತ್ತು ರಮೇಶ್ ಗುಂಡಾವು ರವರು ಹಾಡು ಹಾಡಿದರು. ಹಾಗೆಯೇ ನೃತ್ಯ ಅಭ್ಯಾಸ ಮಾಡಲಾಯಿತು. ಈ ನೃತ್ಯ ಅಭ್ಯಾಸವನ್ನು ಸ್ವಾಗತ ನೃತ್ಯ ಹಾಗೂ ಬಿಳಲು ತರುವುದನ್ನು ಜೊತೆಗೆ ಅಭ್ಯಾಸ ಮಾಡಲಾಯಿತು. ಕೊಗ್ಗ ರಮೇಶ್‌ರವರು ಕೂಡ ಕೆಲವು ಹೆಜ್ಜೆಗಳನ್ನು ಹೇಳಿಕೊಟ್ಟರು.







7–3–2021



ದಿನಾಂಕ 7–3–2021 ರಂದು ನೃತ್ಯ ಅಭ್ಯಾಸದೊಂದಿಗೆ ಪ್ರಾರಂಭಿಸಲಾಯಿತು. ಇಂದಿನ ತರಬೇತಿಯಲ್ಲಿ ಡೋಲು ತಯಾರಿಸುವ ಬಗ್ಗೆ, ಅದರ ಹಗ್ಗ ಬಿಗಿಯಾಗಿಸುವ ಬಗ್ಗೆ, ಮುಚ್ಚಿ ಹಾಕುವ ಬಗ್ಗೆ ಕೊರಲ್ ಕಲಾ ತಂಡದ ಸದಸ್ಯರು ಪ್ರಾತ್ಯಕ್ಷಿತೆ ನೀಡಿದರು. ಡೋಲು ಬಡಿಯುವ ಮೊದಲಿಗೆ ಅದರ ಹಗ್ಗವನ್ನು ಎಳೆದು ಬಿಗಿಗೊಳಿಸಬೇಕು ಎಂಬುದನ್ನು ರಮೇಶ್ ಮಂಚಕಲ್ ರವರು ತಿಳಿಸಿ ಹೇಳಿದರು. ಹಾಗೇ ಡೋಲನ್ನು ಬಡಿದು ಹರಿದು ಹೋದ ಚರ್ಮವನ್ನು ಹೇಗೆ ಬದಲಿಗೊಳಿಸಬೇಕು ಎಂಬುದನ್ನು ತಿಳಿಸಿದರು. ನಂತರ ನೃತ್ಯ ಅಭ್ಯಾಸವನ್ನು ಮಾಡಲಾಯಿತು. ಈ ದಿನ 4ನೇ ನೃತ್ಯವಾದ ಕೆಡ್ಡಸ  ನೃತ್ಯವನ್ನು ಕಲಿಸಿದರು.

## ವಾದ್ಯ+ನೃತ್ಯ ಸಂಯೋಜನೆಯ ಕಾರ್ಯಾಗಾರ 10–3–2021 ರಿಂದ 16–3–2021

10–3–2021

ದಿನಾಂಕ 10–3–2021 ರಂದು ತರಬೇತಿಯನ್ನು ರಮೇಶ್ ಗುಂಡಾವುರವರು ಸ್ವಾಗತಿಸಿದರು. ಈ ದಿನದಂದು ಮೊದಲಿಗೆ ನೃತ್ಯ ಸಂಯೋಜಕ ಕ್ರಿಸ್ಟೋಫರ್ ಡಿಸೋಜ ರವರನ್ನು ಸ್ವಾಗತಿಸಲಾಯಿತು. ನಂತರ ಡ್ಯಾನ್ಸ್ ಪ್ರಾಕ್ಟೀಸ್ ಬಗ್ಗೆ ಚರ್ಚಿಸಲಾಯಿತು. ವಿದ್ಯಾರ್ಥಿಗಳು ಕಲಿತ ನೃತ್ಯಗಳನ್ನು ನೃತ್ಯ ಸಂಯೋಜಕರ ಮುಂದೆ ಪ್ರದರ್ಶಿಸಿದರು. ನೃತ್ಯ ಸಂಯೋಜಕರು ನೃತ್ಯ ಸಂಯೋಜನೆಯನ್ನು ಅಚ್ಚುಕಟ್ಟಾಗಿ ಮಾಡಿದರು. ನೃತ್ಯದ ಹೆಜ್ಜೆಗಳನ್ನು ಲೆಕ್ಕ ಮಾಡಿ ನೆನಪಿಡುವಂತೆ ತಿಳಿಸಿಕೊಟ್ಟರು. ನಂತರ ಮೊದಲ ಸ್ವಾಗತ ನೃತ್ಯವನ್ನು ಅಭ್ಯಸಿಸಲಾಯಿತು.







11–3–2021

ದಿನಾಂಕ 11–3–2021 ರಂದು ತರಬೇತಿಯನ್ನು ರಮೇಶ್ ಮಂಚಕಲ್ ರವರು ಸ್ವಾಗತಿಸಿದರು. ಈ ದಿನ ಎರಡನೇ ನೃತ್ಯವಾದ ಕಾಡಿಗೆ ಹೋಗಿ ಬಿಳಲು ತರುವ ದೃಶ್ಯವನ್ನು ನೃತ್ಯ ಸಂಯೋಜಕರೊಂದಿಗೆ ಅಭ್ಯಾಸ ಮಾಡಲಾಯಿತು



.



12–3–2021

ದಿನಾಂಕ 12–3–2021 ರಂದು ತರಬೇತಿಯನ್ನು ಸಾಯಿರಾಜ್ ರವರು ಸ್ವಾಗತಿಸಿದರು. 3ನೇ ನೃತ್ಯ ಹೆಣ್ಣು ಮಗು ಹುಟ್ಟಿದಾಗ ಮಾಡುವ ನೃತ್ಯವನ್ನು  ನೃತ್ಯ ಸಂಯೋಜಕರೊಂದಿಗೆ ಅಭ್ಯಾಸ ಮಾಡಲಾಯಿತು.





13–3–2021

ದಿನಾಂಕ 13–3–2021 ರಂದು ತರಬೇತಿಯನ್ನು  ರೂಪಾ ರವರು ಸ್ವಾಗತಿಸಿದರು. ಈ ದಿನ 4ನೇ ನೃತ್ಯವಾದ ಕೆಡ್ಡಸ ನೃತ್ಯವನ್ನು ನೃತ್ಯ ಸಂಯೋಜಕರೊಂದಿಗೆ ಅಭ್ಯಾಸ ಮಾಡಲಾಯಿತು.



14–3–2021




ದಿನಾಂಕ 14–3–2021 ರಂದು ತರಬೇತಿಯನ್ನು ಕೊಗ್ಗ ರಮೇಶ್ ರವರು ಸ್ವಾಗತಿಸಿದರು. ಇವತ್ತು ಸ್ವಾಗತ ನೃತ್ಯ ಮತ್ತು ಕಾಡಿಗೆ ಹೋಗಿ ಬಿಳಲು ತರುವ ದೃಶ್ಯದ ನೃತ್ಯವನ್ನು ನೃತ್ಯ ಸಂಯೋಜಕರ ಮುಂದೆ ಪ್ರದರ್ಶಿಸಲಾಯಿತು. ಹೆಜ್ಜೆಯ ತಪ್ಪುಗಳನ್ನು ಸರಿ ಮಾಡಿಕೊಳ್ಳುವಂತೆ ಅಭ್ಯಸಿಸುವಾಗಲೇ ಹೇಳಿಕೊಟ್ಟರು. ವಿದ್ಯಾರ್ಥಿಗಳು ನೃತ್ಯ ಮಾಡುವಾಗ ಹೊಂದಾಣಿಕೆ ಬಹಳ ಮುಖ್ಯವಾಗಿರುತ್ತದೆ ಎಂದು ಹೇಳಿದರು. ಪರಸ್ಪರ ಸಹಕಾರ ಹೊಂದಾಣಿಕೆಯೊಂದಿಗೆ ಅಭ್ಯಾಸ ಮಾಡಲು ಸಲಹೆ ನೀಡಿದರು.






15–3–2021

ದಿನಾಂಕ 15–3–2021 ರಂದು ತರಬೇತಿಯನ್ನು ಲೇಖರಾಜ್ ರವರು ಸ್ವಾಗತಿಸಿದರು. ಈ ದಿನದಂದು ಹೆಣ್ಣು ಮಗು ಹುಟ್ಟಿದಾಗ ಸಂಭ್ರಮಿಸುವ ದೃಶ್ಯದ ನೃತ್ಯ ಮತ್ತು ಕೆಡ್ಡಸ ನೃತ್ಯವನ್ನು ಅಭ್ಯಸಿಸಲಾಯಿತು. ವಿದ್ಯಾರ್ಥಿಗಳು ಹೆಜ್ಜೆ ಹಾಕುವಾಗ ಹೊಂದಾಣಿಕೆಯ ಕಡೆ ಗಮನ ಹರಿಸುತ್ತಾ ಅಭ್ಯಸಿಸಿದರು. ನೃತ್ಯ ಸಂಯೋಜಕರು ವಿದ್ಯಾರ್ಥಿಗಳು ಹೆಜ್ಜೆ ಹಾಕುವಾಗ ಹುರಿದುಂಬಿಸುತ್ತಾ ಪ್ರೇರೇಪಿಸಿದರು.






16–3–2021

ದಿನಾಂಕ 16–3–2021 ರಂದು ತರಬೇತಿಯನ್ನು ರಮೇಶ್ ಗುಂಡಾವುರವರು ಸ್ವಾಗತಿಸಿದರು. ಈ ದಿನ ಸ್ವಾಗತ ನೃತ್ಯ, ಕಾಡಿಗೆ ಹೋಗಿ ಬಿಳಲು ತೆಗೆದು ತರುವ ನೃತ್ಯ, ಹೆಣ್ಣು ಮಗು ಜನಿಸಿದಾಗ ಸಂಭ್ರಮ ಪಡುವ ದೃಶ್ಯದ ನೃತ್ಯ, ಕೆಡ್ಡಸ ನೃತ್ಯ ಎಲ್ಲವನ್ನು ಅಭ್ಯಸಿಸಲಾಯಿತು. ಕೊನೆಯ ನೃತ್ಯವಾದ (ಕೊರ್ರೆ ಕೊನ್ಕೆ) ಕೊರಗರ ಸಾಮೂಹಿಕ ನೃತ್ಯವನ್ನು ಇಂದು ಅಭ್ಯಾಸ ಮಾಡಲಾಯಿತು. ವಿದ್ಯಾರ್ಥಿಗಳು ನೃತ್ಯ ಸಂಯೋಜಕರೊಂದಿಗೆ ತಮ್ಮ ಅನುಭವವನ್ನು ಹಂಚಿದರು. ಕೊನೆಗೆ ನೃತ್ಯ ಸಂಯೋಜಕರಾದ ಕ್ರಿಸ್ಟೋಫರ್ ಡಿಸೋಜ ಸರ್ ರವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

**ಪ್ರದರ್ಶನಾಭ್ಯಾಸ/ ಪ್ರಚಾರ ಸಂಬಂಧೀ ಕ್ರಿಯೆಗಳು** 18–3–2021 **ರಿಂದ** 23–3–2021



ದಿನಾಂಕ 18–3–2021 ರಂದಿನ ತರಬೇತಿಗೆ ಸಾಯಿರಾಜ್ ರವರು ಸ್ವಾಗತವನ್ನು ಕೋರಿದರು. ನಂತರ ಕೊರ್ರೆ ಕುಜೇರ್ಲು ಕಲಾ ತಂಡ ದ ತರಬೇತಿಯ ಕೊನೆಯ ಹಂತವಾದ ಸಾರ್ವಜನಿಕ ಪ್ರದರ್ಶನದ ದಿನವನ್ನು ತರಬೇತುದಾರರಾದ ಕೊರಲ್ ಕಲಾ ತಂಡ ಕುಡ್ಲದ ಸದಸ್ಯರು ಮತ್ತು ತರಬೇತಿಗೆ ಬಂದ ವಿದ್ಯಾರ್ಥಿಗಳ ಸಲಹೆಯ ಮೇರೆಗೆ ದಿನಾಂಕ 28–3–2021 ಆದಿತ್ಯವಾರಕ್ಕೆ ನಿಗದಿ ಪಡಿಸಲಾಯಿತು. ನಂತರ ಕಾರ್ಯಕ್ರಮದ ಪ್ರಚಾರದ ಬಗ್ಗೆ ಹ್ಯಾಂಡ್ ಬಿಲ್ ತಯಾರಿಸುವಿಕೆ ಹಾಗೂ ಪ್ರಚಾರ ಮಾಡುವುದರ ಬಗ್ಗೆ ಚರ್ಚಿಸಲಾಯಿತು. ವೇದಿಕೆ ಪ್ರದರ್ಶನಕ್ಕಾಗಿ ವಿದ್ಯಾರ್ಥಿಗಳು ವೇದಿಕೆಯಲ್ಲಿ ಡೋಲು ವಾದನ ನುಡಿಸುವ ಮತ್ತು ನೃತ್ಯವನ್ನು ಪ್ರದರ್ಶಿಸುವ ಹಾಗೆ ಪೂರ್ವಾಭ್ಯಾಸ ಮಾಡಲು ಪ್ರಾರಂಭಿಸಿದರು. ಈ ಅಭ್ಯಾಸ ಕ್ರಮವಾಗಿ 19–3–2021, 20–3–2021, 21–3–2021, 22–3–2021 ರಂದು ಅಭ್ಯಸಿಸಲಾಯಿತು.





**ಪ್ರದರ್ಶನಕ್ಕೆ ಪೂರ್ವ ಸಿದ್ಧತೆ/ ಪ್ರಚಾರ ಕಾರ್ಯ 24–3–2021 ರಿಂದ 28–3–2021**

ದಿನಾಂಕ 24–3–2021 ರಂದು 28–3–2021 ರಂದು ನಡೆಯುವ ಕಾರ್ಯಕ್ರಮದ ಬಗ್ಗೆ ಚರ್ಚಿಸಲಾಯಿತು. ಮೊದಲಿಗೆ ಅಂತಿಮ ಪ್ರದರ್ಶನದ ಬಗ್ಗೆ ಪ್ರಾಯೋಗಿಕವಾಗಿ ಮಾಡಲಾಯಿತು. ನಂತರ ತಯಾರಿಯ ಬಗ್ಗೆ ಪರಿಶೀಲಿಸಲಾಯಿತು. 25–3–2021 ರಂದು ಎಲ್ಲರೂ ತಮಗೆ ವಹಿಸಿದ ಕಾರ್ಯಗಳ ತಯಾರಿ ಖಚಿತ ಪಡಿಸಿಕೊಂಡರು. ವೇಷಭೂಷಣದ ಬಗ್ಗೆ ತಿಳಿಸಿದರು. ಹಾಗೂ ವೇದಿಕೆ ವಿನ್ಯಾಸ ಮಾಡುವ ಬಗ್ಗೆ, ಧ್ವನಿ ಬೆಳಕು, ಊಟದ ವ್ಯವಸ್ಥೆ, ಚಿತ್ರೀಕರಣದ ಬಗ್ಗೆ ಎಲ್ಲರೂ ಚರ್ಚಿಸಿದೆವು. ನಂತರ ವೇದಿಕೆ ಕಾರ್ಯಕ್ರಮದಂದು ಬರುವ ಅತಿಥಿಗಳು, ಅವರ ಸತ್ಕಾರದ ಬಗ್ಗೆ ಚರ್ಚಿಸಿ ತಿಳಿಸಲಾಯಿತು. ವೇದಿಕೆಯ ಬ್ಯಾನರ್ ಹಾಗೂ ಅದರಲ್ಲಿ ಬರೆಯುವುದನ್ನು ಚರ್ಚಿಸಲಾಯಿತು. 26–3–2021 ರಂದು ಕಾರ್ಯಕ್ರಮದ ಪ್ರಚಾರವನ್ನು ಕರ ಪತ್ರ ಹಂಚುವ ಮೂಲಕ ಕಾಲೊನಿಯ ಜನರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು. 27–3–2021 ರಂದು ಅಂತಿಮವಾಗಿ ಮತ್ತೊಮ್ಮೆ ವೇದಿಕೆ ಪ್ರದರ್ಶನದ ಡೋಲು ವಾದನ ಮತ್ತು ನೃತ್ಯವನ್ನು ಪ್ರಾಯೋಗಿಕವಾಗಿ ಅಭ್ಯಸಿಸಲಾಯಿತು.








## ಸಾರ್ವಜನಿಕ ಪ್ರದರ್ಶನ : 28–3–2021




ಈ ದಿನ ತರಬೇತಿಯ ಅಂತಿಮ ಹಂತವಾದ ಮೊದಲ ಸಾರ್ವಜನಿಕ ಪ್ರದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ವೇದಿಕೆ ಸಭಾಂಗಣವನ್ನು ಸಜ್ಜುಗೊಳಿಸಲಾಯಿತು. ಕಾರ್ಯಕ್ರಮವು ಸಂಜೆ 6 ಗಂಟೆಗೆ ನಿಗದಿಯಾಗಿದ್ದು ಸಮಯಕ್ಕೆ ತಕ್ಕಂತೆ ಅತಿಥಿಗಳು ಮತ್ತು ಸಾರ್ವಜನಿಕರು ಸಭಾಂಗಣದಲ್ಲಿ ಹಾಜರಿದ್ದರು. ನಂತರ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

ರಮೇಶ್ ಗುಂಡಾವುರವರು ಸ್ವಾಗತ ಭಾಷಣ ಮಾಡುವ ಮೂಲಕ ಬಂದ ಅತಿಥಿಗಳನ್ನು ವೇದಿಕೆಗೆ ಆಹ್ವಾನಿಸಿದರು. ಅತಿಥಿಗಳಾದ ನಟೇಶ್ ಉಳ್ಳಾಲ್, ವಿದ್ಯಾ ದಿನ್ಕರ್ , ಮೈಮ್ ರಾಮ್ ದಾಸ್, ಬಾಲ್ ರಾಜ್ ಕೋಡಿಕಲ್ ರವರು ವೇದಿಕೆಯನ್ನು ಅಲಂಕರಿಸಿದರು. ಎಲ್ಲಾ ಅತಿಥಿಗಳು ತಮ್ಮ ತಮ್ಮ ಹಿತವಚನದ ಮೂಲಕ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು.




ನಂತರ ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಮೊದಲಿಗೆ ಸಹನಾ ಕೋಡಿಕಲ್‌ರವರ ಶಾಸ್ತ್ರೀಯ ಸಂಗೀತ ನಂತರ ಕೊರ್ರೆ ಕುಜೇಲ್ರು ಕಲಾ ತಂಡದ ಸಾಂಸ್ಕೃತಿಕ ಕಾರ್ಯಕ್ರಮದ ನಿರೂಪಣೆಯನ್ನು ಸಾಯಿರಾಜ್ ನೆರವೇರಿಸಿದರು. ತರಬೇತಿಯ ಎಲ್ಲಾ ವಿದ್ಯಾರ್ಥಿಗಳು ಡೋಲಿನ ಮೂಲಕ ನಡಕೆದ ಟಕ್ಕನ್ನು ಬಡಿಯುತ್ತಾ ಬಂದು ಸುಗಿಮುನ ಟಕ್ಕಿನ ಮೂಲಕ ಎಲ್ಲ ವಿದ್ಯಾರ್ಥಿಗಳು ಪ್ರಾರ್ಥನೆ ಮಾಡಿದರು.






ಮೊದಲನೆಯದಾಗಿ ಸ್ವಾಗತ ನೃತ್ಯ , ಎರಡನೆಯದಾಗಿ ಕಾಡಿಗೆ ಹೋಗಿ ಬಿಳಲು ತೆಗೆಯುವ ನೃತ್ಯ, ಮೂರನೆಯದಾಗಿ ಹೆಣ್ಣು ಮಗು ಹುಟ್ಟಿದಾಗ ಸಂಭ್ರಮಿಸುವ ನೃತ್ಯ, ನಾಲ್ಕನೆಯದಾಗಿ ಕೆಡ್ಡಸ (ಬೆಂಕಿ ಹಾಕಿ ಅದರ ಸುತ್ತ ಕುಣಿಯುವುದು) ಹಬ್ಬದ ಸಂಭ್ರಮವನ್ನು ನೃತ್ಯ ರೂಪಕದ ಮೂಲಕ ಪ್ರದರ್ಶಿಸಲಾಯಿತು, ಕೊನೆಯದಾಗಿ ಕೊರ್ರೆ ಕುಣಿಕೆ ನಮ್ಮ ಸಾಮೂಹಿಕ ನೃತ್ಯ ವನ್ನು ಸಾದರ ಪಡಿಸಲಾಯಿತು.

ಇಂದಿನ ಸಾರ್ವಜನಿಕ ಪ್ರದರ್ಶನಕ್ಕೆ ಬಂದ ಎಲ್ಲಾ ಸಭಿಕರೊಂದಿಗೆ ಡೋಲುವಾದನಕ್ಕೆ ಸಾಮೂಹಿಕ ನೃತ್ಯ ಮಾಡಲಾಯಿತು. ಬಂದ ಎಲ್ಲ ಅತಿಥಿಗಳು ಹಾಗೂ  ಸಭಿಕರು ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು ನಂತರ ಊಟದ ವ್ಯವಸ್ಥೆಯನ್ನು ಮಾಡಲಾಯಿತು. ಇಂದಿನ ಸಭೆಯನ್ನು ಮುಗಿಸಲಾಯಿತು

